# ನೆಗಡಿ

■ ವೀರೇಶ ಬ. ಕುರಿ ಸೋಂಪುರ
ಕಲೆ: ಸಂತೋಷ್ ಸಸಿಹಿತ್ಲು

ನೆಗಡಿ ಆದ್ರೆ ಬಹಳ ತೊಂದ್ರೆ
ಕಿಚ ಕಿಚ ಗಂಟಲು ಕೆರೆತ
ಮೂಗಿನಲ್ಲಿ ಸರ್ ಭರ್ ಎಂದು
ಒಂದೇ ಸಮನೆ ಮೊರೆತ!

ಅವ್ವ ಮಾಡಿದ ಅದ್ಭುತ ಅಡುಗೆ
ಉಣ್ಣಲು ಮನಸೇ ಆಗುತ್ತಿಲ್ಲ
ಉಪ್ಪು–ಖಾರ ರುಚಿ ಗೊತ್ತಾಗದೆ
ಅನ್ನವು ಒಳಗೆ ಹೋಗುತ್ತಿಲ್ಲ

ತಲೆಯೆಲ್ಲಾ ಬಲು ಭಾರವಾಗಿ
ಕವಿಯಿತು ಮನಕೆ ಮಂಕು
ಒಬ್ಬರಿಂದೊಬ್ಬರಿಗೆ ಬರುತ್ತಂತೆ
ಇದು ಸಾಂಕ್ರಾಮಿಕ ಸೋಂಕು

ಶುಂಠಿ ಕಷಾಯ ಬಾಮು
ಬಳಸಿ ನೋಡಿದೆನು ಎಲ್ಲಾ
ಸೀನಿ ಸೀನಿ ಮೂಗೆಲ್ಲಾ ಕೆಂಪು
ಬೇಗ ಕಡಿಮೆಯಾಗೋದಿಲ್ಲ!

ಐದಾರು ದಿನಗಳ ನಂತರವೇ
ಸರಿಯುವುದಣ್ಣ ನೆಗಡಿ
ಮೂಗಿರೊತನಕ ತಪ್ಪದು ನೆಗಡಿ
ಇಲ್ಲ ಇದಕೆ ಯಾವ ಗಡಿ ■



## ಕುಂಚ ಪ್ರಪಂಚ





ಭರತ್ ರಾವ್
3ನೇ ತರಗತಿ,
ಪೂರ್ಣ ಚೇತನ
ಪಬ್ಲಿಕ್ ಸ್ಕೂಲ್,
ಮೈಸೂರು



ಎಳೆಯರು ಬಿಡಿಸಿದ ವರ್ಣಚಿತ್ರ, ರೇಖಾಚಿತ್ರಗಳನ್ನು ಅವರ ತರಗತಿ, ಶಾಲೆಯ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ ‘ಕುಂಚ ಪ್ರಪಂಚ’ ವಿಭಾಗಕ್ಕೆ ಕಳಿಸಿಕೊಡಿ.

ವಿಳಾಸ:
**editorsu@sudha.co.in**



ಪೂರ್ವಿಕ್ ವಿ. ಪಾಟೀಲ್
3ನೇ ತರಗತಿ,
ಪ್ರೆಸಿಡೆನ್ಸಿ ಸ್ಕೂಲ್,
ಬೆಂಗಳೂರು
ಉತ್ತರ